## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ರವಿ ಇವರ ನಿಯಮ 72 ರಡಿ ಗಮನ ಸೆಳೆಯುವ ಸೂಚನೆ ಸಂಖ್ಯೆ:226 ಕರಡು ಉತ್ತರ

### ಸೂಚನೆ:

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ ವ್ಯಾಪ್ತಿಯ ಚಿಕ್ಕಬೆಳವಂಗಲ, ರಾಂಪುರ, ಸೊನ್ನೇನಹಳ್ಳಿ ಮತ್ತು ನಾರನಹಳ್ಳಿ ಗ್ರಾಮಗಳ ಸುಮಾರು 2100-00 ಎಕರೆ ವಿಸ್ತೀರ್ಣದ ಕೃಷಿ ಯೋಗ್ಯವಾದ ಜಮೀನುಗಳನ್ನು ಕೈಗಾರಿಕಾ ಪ್ರದೇಶಕ್ಕಾಗಿ ಕೆಐಎಡಿಬಿ ಯವರು ಭೂಸ್ವಾಧೀನ ಮಾಡಿಕೊಳ್ಳುವ ಸಲುವಾಗಿ ಅಧಿಕಾರಿಗಳಿಂದ ಪ್ರಾಥಮಿಕ ವರದಿ ಪಡೆದಿರುತ್ತದೆ. ಈ ವರದಿ ನೀಡುವ ಮುನ್ನ ಸ್ಥಳೀಯ ರೈತರ ಅಭಿಪ್ರಾಯ ಪಡೆಯದೇ ಮತ್ತು ಕೃಷಿ ಜಮೀನುಗಳ ಸಮಗ್ರ ಅಧ್ಯಯನ ನಡೆಸದೇ ಜಮೀನುಗಳನ್ನು ಖಾಲಿ ಇವೆ ಎಂದು ಅಧಿಕಾರಿಗಳು ಸರ್ಕಾರಕ್ಕೆ ಸುಳ್ಳು ವರದಿ ಮಂಡನೆ ಮಾಡಿರುತ್ತಾರೆ. ಕೃಷಿ ಯೋಗ್ಯವಾದ ಈ ಜಮೀನುಗಳನ್ನು ಈ ಗ್ರಾಮಗಳ ರೈತರು ಬಿಟ್ಟುಕೊಡಲು ಸಿದ್ಧರಿಲ್ಲದ ಕಾರಣ ಈ ಜಮೀನುಗಳನ್ನು ಕೈಗಾರಿಕೆಗಳಿಗಾಗಿ ಭೂಸ್ವಾಧೀನ ಮಾಡಿಕೊಳ್ಳುವ ಮುನ್ನ ಆ ಭಾಗದ ರೈತರನ್ನು ಗಮನಕ್ಕೆ ತೆಗೆದುಕೊಂಡು ಅವರ ಅಭಿಪ್ರಾಯಗಳಿಗೆ ಮನ್ನಣೆ ನೀಡಿ ಮುಂದಿನ ನಿರ್ಧಾರಗಳನ್ನು ಕೈಗೊಳ್ಳುವ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಗಮನ ಸೆಳೆಯಬಯಸುತ್ತೇನೆ.

### ಹೇಳಿಕೆ:

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ, ಚಿಕ್ಕಬೆಳವಂಗಲ, ಸೊನ್ನೇನಹಳ್ಳಿ, ರಾಂಪುರ, ನಾರನಹಳ್ಳಿ ಗ್ರಾಮಗಳಲ್ಲಿ ಒಟ್ಟು 2100-00 ಎಕರೆ ವಿಸ್ತೀರ್ಣದ ಜಮೀನು ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಲು ಉದ್ದೇಶಿಸಿ ಕಾರ್ಯಪಾಲಕ ಅಭಿಯಂತರರು-3 ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ-2 ಕೆಐಎಡಿಬಿ ಬೆಂಗಳೂರು ಇವರು ಜಂಟಿ ಸ್ಥಳ ತನಿಖೆ ಮಾಡಿದ್ದು, ಕೈಗಾರಿಕಾ ಯೋಜನೆಗೆ ಮೇಲ್ಕಂಡ ಜಮೀನುಗಳು ಅವಶ್ಯಕತೆ ಇದ್ದು, ಈ ಜಮೀನು ಎಸ್.ಟಿ.ಆರ್.ಆರ್. ರಸ್ತೆ ಹೊಂದಿಕೊಂಡಂತೆ ಇರುತ್ತದೆ. ಈ ಜಮೀನು ಕ್ವಿನ್ ಸಿಟಿ ಯೋಜನೆಗೆ ಭೂಸ್ವಾಧೀನವಾಗಿರುವ ಪ್ರದೇಶಕ್ಕೆ ಅಂದಾಜು 4 ಕಿ.ಮೀ. ಅಂತರದಲ್ಲಿ ಇರುತ್ತದೆ. ಈ ಜಮೀನು ಖಾಲಿ ಇರುವುದು ಕಂಡುಬಂದಿದ್ದು, ಕೈಗಾರಿಕೆ ಸ್ಥಾಪನೆಗೆ ಸೂಕ್ತವಾಗಿರುತ್ತದೆಂದು ಅಭಿಪ್ರಾಯ ನೀಡಿರುತ್ತಾರೆ.

ಮೇಲ್ಕಂಡ ಸ್ಥಳ ತನಿಖಾ ವರದಿಯ ಅನುಸಾರ ಸದರಿ ಜಮೀನನ್ನು ಕೆಐಎಡಿಬಿ ಯಿಂದ ಸ್ವಾಧೀನಪಡಿಸುವ ಕುರಿತು ದಿನಾಂಕ:07.03.2026 ರಂದು ಜರುಗಿದ 398 ನೇ ಮಂಡಳಿ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ.

**ಸಂಖ್ಯೆ: ಸಿಐ 234 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.